ಶ್ರೀ ಕೆ.ಎಚ್. ಶ್ರೀನಿವಾಸ್.—ಉತ್ಪಾದನೆ ತೃಪ್ತಿಕರವಾಗಿದೆ ಅಂದರೆ ಗರಿಷ್ಟ ಉತ್ಪಾದನೆ ಏನಿರಬೇಕು ? ಏಪ್ರಿಲ್ ತಿಂಗಳಿನಲ್ಲಿ ಎರಡನೆಯ ಘಟಕ ಕೇವಲ ೧೬ ದಶಲಕ್ಷ ಯೂನಿಟ್ ಉತ್ಪಾದನೆ ಮಾಡಿದೆ. ಆಕ್ಟೋಬರ್ ತಿಂಗಳಿನಲ್ಲಿ ೪೫ ದಶಲಕ್ಷ ಯೂನಿಟ್ ಉತ್ಪಾದನೆಯಾಗಿದೆ. ಮೊದಲನೆಯ ಘಟಕ ಫಸ್ಟ್‌ಸ್ಟೇಜ್‌ನಲ್ಲಿ ಆಗಸ್ಟ್ ತಿಂಗಳಿನಲ್ಲಿ ೨ ದಶಲಕ್ಷ ಯೂನಿಟ್ ಉತ್ಪಾದನೆಯಾಗಿದೆ. ಸೆಪ್ಟೆಂಬರ್‌ನಲ್ಲಿ ಕೇವಲ ೧೩ ದಶಲಕ್ಷ ಯೂನಿಟ್ ಉತ್ಪಾದನೆಯಾಗಿದೆ, ಈ ರೀತಿ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆ ಯಾಗುವುದಕ್ಕೆ ಕಾರಣವೇನು ? ಗರಿಷ್ಟ ಪ್ರಮಾಣ ಏನಿರಬೇಕಿತ್ತು ? ಈಗ ಉತ್ಪಾದನೆಯಾಗತಕ್ಕ ವಿದ್ಯುತ್ ಎಷ್ಟು ಪರ್ಸೆಂಟೇಜ್ ಆಗಬೇಕಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಥರ್ಮಲ್ ವಿದ್ಯುತ್ ಘಟಕಗಳಲ್ಲಿ ಕಡಿಮೆ ವಿದ್ಯುತ್ ಉತ್ಪಾದನೆ ಯಾಗುವುದಕ್ಕೆ ಕಾರಣ ಕೆಲವು ಸಾರಿ ಅಲ್ಪಸ್ವಲ್ಪ ರಿಪೇರಿ ಬರಬಹುದು. ಕೆಲವು ಸಾರಿ ಲೋಡ್ ಕಡಿಮೆ ಇದ್ದಾಗ, ಕಾನ್‌ಸ್ಟೆಂಟ್ ಲೋಡ್ ಕಡಿಮೆಯಾದಾಗ ಉತ್ಪಾದನೆ ನಿಂತುಹೋಗುತ್ತದೆ ಮತ್ತೆ ಸ್ಟಾರ್ಟ್ ಮಾಡಬೇಕಾದರೆ ಎರಡು ಮೂರು ಗಂಟೆಗಳು ಬೇಕಾಗುತ್ತದೆ. ಬಾಯ್ಲರ್ ಇನ್‌ಸ್ಪೆಕ್ಷನ್ ಗೋಸ್ಕರ ಇದನ್ನು ನಿಲ್ಲಿಸಿದ್ದೇವೆ. ಈ ತರಹ ಸ್ವಲ್ಪ ಕಡಿಮೆ ಉತ್ಪಾದನೆಯಾಗಿದೆ. ಕಳೆದ ತಿಂಗಳಿಗೂ ಉತ್ಪಾದನೆ ಕಡಿಮೆಯಾದ ತಿಂಗಳಿಗೂ ಹೋಲಿಸಿದರೆ ಶೇಕಡ ೪೫ಕ್ಕಿಂತ ಜಾಸ್ತಿ ಎಫಿಶಿಯೆನ್ಸಿ ಬರುವುದಿಲ್ಲ. ಶೇಕಡ ೪೫ರಷ್ಟು ಬರುತ್ತಿದೆ, ಈಗ ಕೆಲಸ ಮಾಡುತ್ತಿರುವುದು ತುಂಬಾ ತೃಪ್ತಿಕರವಾಗಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಲೋಕಾಭಿರಾಮವಾಗಿ ಥರ್ಮಲ್ ಯೂನಿಟ್ ಕಷ್ಟಗಳನ್ನು ಕೇಳಂತಿದ್ದೇವೆ. ರಾಯಚೂರಿನಲ್ಲಿ ಹೊಸದಾಗಿ ಥರ್ಮಲ್ ಪ್ಲಾಂಟ್ ಮಾಡಲಾಗಿದೆ. ಪ್ರಾಡಿದ ತಕ್ಷಣ ರಿಪೇರಿ ಬರುತ್ತದೆಂದು ಹೇಳಿದರೆ ಆಗುವುದಿಲ್ಲ. ಲೋಡ್ ಕಡಿಮೆಯಾಗುವುದಕ್ಕೆ ಮಾನಿಟರಿಂಗ್ ಮಾಡಬೇಕಂ. ನನಗೆ ತಿಳಿದಮಟ್ಟಿಗೆ ವಿದ್ಯುಚ್ಛಕ್ತಿ ಮಂಡಳಿಯವರಂ ಲೋಡ್ ಕಡಿಮೆಯಾಗಿರಂವ ಬಗ್ಗೆ ಸರ್ಕಾರದ ಒಪ್ಪಿಗೆ ಕೇಳಿದ್ದಾರೆ. ಸರ್ಕಾರ ಒಪ್ಪಿಗೆ ಕೊಟ್ಟಿಲ್ಲ, ಕೆಲವು ಸಾರಿ ಈ ತರಹ ತೊಂದರೆಯಾಗಿದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಂ ತನ್ನ ಪ್ರವಾಸ ಕಾಲದಲ್ಲಿ ಥರ್ಮಲ್ ಪ್ಲಾಂಟ್‌ಗೆ ಹೋಗಿದ್ದಾಗ ಅದು ತಿಳಿದುಬಂತು. ಪ್ರತಿ ತಿಂಗಳೂ ಎರಡೂ ಯೂನಿಟ್‌ಗಳಿಂದ ಗರಿಷ್ಟ ಉತ್ಪಾದನೆ ಮಾಡುವುದಕ್ಕೆ ಆಗಿಲ್ಲ. ಥರ್ಮಲ್‌ಪ್ಲಾಂಟ್‌ಗಳು ಲೋಕಾಭಿರಾಮವಾಗಿ ಬೇಡವೆಂದು ಹೇಳಂವುದಕ್ಕೆ ಬದಲಾಗಿ, ಯಾವ ಕಾರಣದಿಂದ ತೊಂದರೆಯಾಗಿದೆ ಎಂಬುದನ್ನು ಅದರ ಬಗ್ಗೆ ಖಚಿತವಾದ ಮಾಹಿತಿ ಇದ್ದರೆ ದಯವಿಟ್ಟು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಪ್ಲಾನಿಂಗ್ ಕಮಿಷನ್‌ರವರು ೨ ಸಾವಿರ ಮಿಲಿಯನ್ ಯೂನಿಟ್ ಎಂದು ನಿಗದಿ ಮಾಡಿದ್ದಾರೆ. ಸೆಪ್ಟೆಂಬರ್‌ನಲ್ಲಿ ಇನ್ಸ್‌ಪೆಕ್ಷನ್‌ಗೋಸ್ಕರ ನಿಲ್ಲಿಸಿದ್ದೇವೆ ಉತ್ಪಾದನೆ ಕಡಿಮೆಯಾಗಿದೆ. ಕೆಲಸ ತೃಪ್ತಿಕರವಾಗಿದೆ, ಪ್ರಾರಂಭಿಕ ಹಂತದಲ್ಲಿ ಸ್ಥಿರತೆಗೆ ಬರಲಿಕ್ಕೆ ಎರಡಂ ಮೂರು ತೊಂದರೆಗಳು ಇದ್ದವು ನಾರ್ಮಲ್ ಆಗಿ ಯೂನಿಟ್‌ಗಳಲ್ಲಿ ಸಮಸ್ಯೆಗಳು ಬರುತ್ತವೆ. ಮೊದಲನೆಯ ಯೂನಿಟ್‌ನಲ್ಲಿ ಏನೂ ತೊಂದರೆಯಿಲ್ಲ ಆರೇಳು ತಿಂಗಳುಗಳಿಂದ ತೃಪ್ತಿಕರವಾಗಿದೆ. ಅದಂ ವಿದ್ಯುತ್ ಉತ್ಪಾದನೆ ಮಾಡುತ್ತಿದೆ.

ರಾಜ್ಯದಲ್ಲಿ ಆನೆಗಳ ಸಂತತಿಯಂ ಕ್ಷೀಣಿಸುತ್ತಿರುವುದರ ಬಗ್ಗೆ.

೫೫೯. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆನೆಗಳ ಸಂತತಿ ದಿನ ಕಳೆದಂತೆ ಕ್ಷೀಣಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವುಗಳ ಸಂತತಿ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈ.ಕೆ. ರಾಮಯ್ಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಬಂದಿಲ್ಲ.

ಆ) ಆನೆಗಳ ಸಂತತಿಯನ್ನು ರಕ್ಷಿಸಲು ಹಲವಾರು ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಲಾಗಿದೆ; ತುರ್ತು ಸಂದೇಶಕ್ಕಾಗಿ ಇಲಾಖೆಯಲ್ಲಿ ೩೫ ವಾಕಿ ಟಾಕಿ ಉಪಕರಣಗಳನ್ನು ಕೊಡಲಾಗಿದೆ. ಪ್ರಭಾವ ಶಾಲಿಯಾದಂತ ಆಯುಧಗಳನ್ನು ಕೊಡಲಾಗಿದೆ. ಹಾಗೂ ೫ ವರ್ಷಗಳ ವ್ಯಾಪ್ತಿಗೆ ೩.೮೩ ಕೋಟಿ ರೂ.ಗಳ ಒಂದು ಕಾರ್ಯಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಆರ್ಥಿಕ ನೆರವಿಗಾಗಿ ಮಂಡಿಸಲಾಗಿದೆ. ಇದರಲ್ಲಿ ರೂ. ೧೨.೦೦ ಲಕ್ಷಗಳನ್ನು ೧೯೮೬-೮೭ನೇ ಸಾಲಿಗೆ ಮಂಜೂರು ಮಾಡಿದ್ದು ಪ್ರಸ್ತುತ ಸಾಲಿಗೆ ೧೦.೫೦ ಲಕ್ಷ ರೂ.ಗಳನ್ನು ನಿಗದಿಪಡಿಸಿರುತ್ತಾರೆ. ಕಳೆದ ವರ್ಷ ನಾಲ್ಕು ಜೀಪುಗಳನ್ನು ಇಲಾಖೆ ಬಳಕೆಗೆ ಕೊಡಲಾಗಿದೆ. ಹಾಗೂ ಈ ಸಾಲಿಗೆ ೪೦ ನಿಸ್ತಂತು ಉಪಕರಣಗಳು ಹಾಗೂ ೮೦ ತುಪಾಕಿ, ಹಾಗೂ ೫ ಜೀಪುಗಳನ್ನು ಖರೀದಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ನೆರೆಯ ರಾಜ್ಯಗಳೊಂದಿಗೆ ಸಮಾಲೋಚಿಸಿ ಆನೆ ಹತ್ಯೆಯನ್ನು ತಡೆಗಟ್ಟುವ ತಂಡವನ್ನು ರಚಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜುಗೌಡ.—ಆನೆಗಳ ಸಂತತಿ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಎಂಬುದು ನನ್ನ ಪ್ರಶ್ನೆ ಇದೆ. ಆದರೆ ಮಾನ್ಯ ಮಂತ್ರಿಗಳು ಆನೆಗಳ ಸಂತತಿಯನ್ನು ರಕ್ಷಿಸಲಿಕ್ಕೆ ಏನು ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆನೆಗಳ ಹತ್ಯೆಯನ್ನು ತಡೆಗಟ್ಟಲು ಸರ್ಕಾರ ವಿಫಲ ವಾಗಿದೆ. ಕಳೆದ ದಶಕದಲ್ಲಿ ದಂತಕ್ಕೋಸ್ಕರ ಎಷ್ಟು ಆನೆಗಳನ್ನು ಕೊಲ್ಲಲಾಗಿದೆ ಎಂದು ದಯವಿಟ್ಟು ಹೇಳುತ್ತೀರಾ ?

ಶ್ರೀ ಜಿ.ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಕೈಗೊಂಡಿರುವ ಕ್ರಮಂ ಗಳಿಂದ ೧೯೮೫-೮೭ರಲ್ಲಿ ಸುಮಾರು ೨೫ ಪ್ರಕರಣಗಳು ಇದ್ದರೆ ಇಲ್ಲಿಯವರೆಗೆ ಬಂದ ಮಾಹಿತಿಗಳ ಪ್ರಕಾರ ಕೇವಲ ಎರಡು ಆನೆಗಳ ಹತ್ಯೆಯಾಗಿದೆ.

ಶ್ರೀ ಜಿ. ರಾಜುಗೌಡ.—ಅರಣ್ಯಗಳಲ್ಲಿ ನಿರಾತಂಕವಾಗಿ ಆನೆಗಳನ್ನು ಬೇಟೆಯಾಡುವುದನ್ನು ತಪ್ಪಿಸಲಿಕ್ಕೆ ಸರ್ಕಾರ ಎಷ್ಟೇ ಕ್ರಮಗಳನ್ನು ಕೈಗೊಂಡರೂ ಕೂಡ ವಿಫಲವಾಗಿರುವುದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು. ನೈಸರ್ಗಿಕ ಅರಣ್ಯವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಕೂಡ ಸರ್ಕಾರ ವಿಫಲವಾಗಿದೆ. ಈ ಎಲ್ಲಾ ಕಾರಣಗಳಿಂದ ಆನೆಗಳ ಸಂತತಿ ಕ್ಷೀಣಿಸುತ್ತಿರುವುದರಿಂದ ಈಗಿರತಕ್ಕಂಥ ಹೆಣ್ಣಾನೆಗಳಿಂದ ಸಂತತಿಯನ್ನು ಹೆಚ್ಚು ಮಾಡಲಿಕ್ಕೆ ಗಂಡಾನೆಗಳ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಹೊರಗಡೆಯಿಂದ ಗಂಡಾನೆಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ.ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೫ನೇ ಜನಗಣತಿಯ ಪ್ರಕಾರ ನಮ್ಮ ಅರಣ್ಯಗಳಲ್ಲಿ ಸುಮಾರು ೩೫೭ ಆನೆಗಳು ಇವೆ. ಇವುಗಳಲ್ಲಿ ೭೦ಕ್ಕಿ ಗಂಡಾನೆಗಳು ಇವೆ. ಆದ್ದರಿಂದ ಬೇರೆ ಕಡೆಯಿಂದ ಗಂಡಾನೆಗಳನ್ನು ತರಿಸುವುದು ಅವಶ್ಯಕತೆ ಇಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಗಂಡಾನೆಗಳು ಎಲ್ಲಿ ಸಿಗುತ್ತವೆ ಎಂದು ಮಾನ್ಯ ರಾಜಗೌಡರು ಸಜೆಸ್ಟ್ ಮಾಡಬೇಕು.

ಶ್ರೀ ಬಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಸಾಕಷ್ಟು ಪ್ರಶ್ನೆ ಕೇಳಿದ್ದೀರಿ.

ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ನೀಡುವ ಬಗ್ಗೆ

೧೩೧. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ ಸೌಲಭ್ಯವನ್ನು ಕೋರಿ ಸರ್ಕಾರಕ್ಕೆ ಅರ್ಜಿ ಬಂದಿರುವ ನಿರುದ್ಯೋಗಿ ಪದವೀಧರರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು).

ಆ) ಸದರಿ ಅರ್ಜಿಗಳಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಸರ್ಕಾರದವರು ಸಾಲವನ್ನು ನೀಡಿದ್ದಾರೆ ಹಾಗೂ ಅದರ ಒಟ್ಟು ಮೊತ್ತವೆಷ್ಟು ?